"ವಿಜಯ ಕರ್ನಾಟಕ" PAGE - 06

"VIJAYA KARNATAKA"

DATE - 03/01/2016



ಅದಮ್ಯ ಚೇತನ ಸೇವಾ ಉತ್ಸವದಲ್ಲಿ ಕೇಂದ್ರ ಸಚಿವ ಜೆ.ಪಿ.ನಡ್ಡಾ ಹೇಳಿಕೆ

# ದೇಶದ ಎಲ್ಲ ರಕ್ತ ನಿಧಿಗೆ ತಿಂಗಳಲ್ಲಿ ಒಂದೇ ವ್ಯವಸ್ಥೆ ಅಳವಡಿಕೆ

■ ವಿಕ ಸುದ್ದಿಲೋಕ ಬೆಂಗಳೂರು

ದೇಶದಲ್ಲಿರುವ ಎಲ್ಲ ರಕ್ತ ನಿಧಿಗಳನ್ನು ಒಂದೇ ವ್ಯವಸ್ಥೆಯ ಸಂಪರ್ಕದಡಿ ತರುವ ಕೆಲಸ ಪ್ರಗತಿಯಲ್ಲಿದೆ. ಈ ಕಾರ್ಯವು ತಿಂಗಳಾಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ.ನಡ್ಡಾ ತಿಳಿಸಿದರು.

ಅದಮ್ಯ ಚೇತನ ಸಂಸ್ಥೆಯು ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 'ಅದಮ್ಯ ಚೇತನ ಸೇವಾ ಉತ್ಸವ'ದ ಮೂರನೇ ದಿನವಾದ ಶನಿವಾರ ಆರೋಗ್ಯ ಸಂಜೀವಿನಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ರಕ್ತ ನಿಧಿಗಳನ್ನು ಒಂದೇ ಸೂರಿನಡಿ ತರುತ್ತಿರುವುದರಿಂದ ತುರ್ತು ಅಗತ್ಯವುಳ್ಳವರಿಗೆ ಸುಲಭವಾಗಿ ರಕ್ತವನ್ನು ಒದಗಿಸಬಹುದು. ಅಲ್ಲದೇ ರಕ್ತ ನಿಧಿಗಳ ಸಂಪರ್ಕ ವ್ಯವಸ್ಥೆಯಿಂದ ದೇಶದ ಯಾವುದೇ ಭಾಗದಿಂದಲೂ ರೋಗಿಗೆ ಅಗತ್ಯವಿರುವ ಗುಂಪಿನ ರಕ್ತ ದೊರಕುವಂತೆ ಮಾಡಲು ಸಾಧ್ಯವಾಗಲಿದೆ,'' ಎಂದು ಹೇಳಿದರು.

''ಪಾಶ್ಚಿಮಾತ್ಯ ಸಂಸ್ಕೃತಿಯಂತೆ ಪ್ರಕೃತಿಯನ್ನು ಶೋಷಿಸಿ, ನೈಸರ್ಗಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಳ್ಳುವುದು ತರವಲ್ಲ. ಪರಿಸರದ ಸ್ಥಿತಿಯನ್ನು ಕಂಡರೆ, ದುಃಖವಾಗುತ್ತದೆ. ಪರಿಸರ ಮತ್ತು ಮನುಷ್ಯರ ನಡುವಿನ ಸಂಬಂಧ ಗಟ್ಟಿಯಾಗಿರಬೇಕು. ನೈಸರ್ಗಿಕ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಪರಿಸರ ಸ್ನೇಹಿ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು,'' ಎಂದು ಸಲಹೆ ನೀಡಿದರು.

''ಅದಮ್ಯ ಚೇತನ ಸಂಸ್ಥೆಯು ಒಬ್ಬರಿಗೆ ಒಂದು ಗಿಡ ಎಂಬ ಅಭಿಯಾನ ಆರಂಭಿಸಿರುವುದು ಅಭಿನಂದನಾರ್ಹ ವಾಗಿದೆ. ಇದು ಆದಷ್ಟು ಬೇಗ ಸಾಕಾರಗೊಂಡು, ಒಬ್ಬರಿಗೆ ಏಳು ಮರಗಳನ್ನು ಬೆಳೆಸುವ ಪ್ರಯತ್ನಕ್ಕೆ ಕೈ ಹಾಕಲಿ. ಇದರಿಂದ ಬೆಂಗಳೂರು ಹಸಿರಾಗಲು ಸಾಧ್ಯವಾಗುತ್ತದೆ. ತೇಜಸ್ವಿನಿ ಅನಂತಕುಮಾರ್ ಅವರು ಬದ್ಧತೆಯಿಂದ ಮಕ್ಕಳಿಗೆ ಅನ್ನ, ಅಕ್ಷರ, ಆರೋಗ್ಯ ನೀಡುವ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಎಲ್ಲರಿಗೂ ಗುಣಮಟ್ಟದ ಆಹಾರವನ್ನು ಪೂರೈಸುತ್ತಿದ್ದಾರೆ,'' ಎಂದು ಶ್ಲಾಘಿಸಿದರು.

''ಪ್ರತಿ ಕುಟುಂಬಕ್ಕೆ ಔಷಧೀಯ ಸಸಿ ನೀಡಿ, ತಮ್ಮ ಮನೆಯ ಆವರಣದಲ್ಲಿ ಬೆಳೆಸುವ ಕುರಿತು ಹಿಮಾಚಲ ಪ್ರದೇಶದ ಸರಕಾರದೊಂದಿಗೆ ಮಾತುಕತೆ ನಡೆಸಲಾಗಿದೆ. ಇದಕ್ಕೆ ಯೋಜನಾ ಆಯೋಗದಿಂದಲೂ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಈ ರೀತಿಯ ಕಾರ್ಯಕ್ರಮಗಳಿಂದ ಯುವ ಜನರಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸಕ್ಕೆ ಕೈ ಹಾಕಲಾಗಿದೆ,'' ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್, ''ಅಧಿಕ ರಕ್ತದೊತ್ತಡ, ಪಾರ್ಶ್ವವಾಯು, ಕ್ಯಾನ್ಸರ್ ಸೇರಿದಂತೆ ಸಾಂಕ್ರಾಮಿಕವಲ್ಲದ ಹೃದ್ರೋಗ ಸಂಬಂಧಿ ಕಾಯಿಲೆಗಳಿಂದ ಶೇ.50ರಷ್ಟು ಜನರು ಸಾವನ್ನಪ್ಪುತ್ತಿದ್ದಾರೆ. ಪ್ರತಿ 4 ಮಂದಿಯಲ್ಲಿ ಒಬ್ಬರು ಹೃದಯ ಸಂಬಂಧಿ ರೋಗದಿಂದ ಸಾವಿಗೀಡಾಗುತ್ತಿದ್ದಾರೆ. ಈ ಅನುಪಾತವು 2030ರ ವೇಳೆಗೆ 3:1 ಆಗಲಿದೆ. ಹಾಗಾಗಿ, ಕೇಂದ್ರ ಸರಕಾರವು ಇದನ್ನು ರಾಷ್ಟ್ರೀಯ ಪ್ರಾಮುಖ್ಯತೆಯ ರೋಗವೆಂದು ಘೋಷಿಸಬೇಕು,'' ಎಂದು ಮನವಿ ಮಾಡಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಡಾ. ತೇಜಸ್ವಿನಿ ಅನಂತಕುಮಾರ್, ಮಲ್ಲಿಕಾ ನಡ್ಡಾ ಮತ್ತಿತರರು ಉಪಸ್ಥಿತರಿದ್ದರು.




ಬೆಂಗಳೂರಿನಲ್ಲಿ ನಡೆಯುತ್ತಿರುವ 'ಅದಮ್ಯ ಚೇತನ ಸೇವಾ ಉತ್ಸವ'ದಲ್ಲಿ ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ.ನಡ್ಡಾ ಅವರನ್ನು ಶನಿವಾರ ಸನ್ಮಾನಿಸಲಾಯಿತು. ತೇಜಸ್ವಿನಿ ಅನಂತಕುಮಾರ್, ಡಾ. ಮಂಜುನಾಥ್ ಮತ್ತಿತರರಿದ್ದರು.

### ವೈದ್ಯರಿಗೆ ಸನ್ಮಾನ

ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಸಿ.ಎನ್. ಮಂಜುನಾಥ್, ಶಶಿಧರ್ ಬುಗ್ಗಿ, ಡಾ. ಕೃಷ್ಣಮೂರ್ತಿ, ಡಾ. ಶ್ರೀನಾಥ್, ಡಾ. ಬಿ.ಎನ್.ಆಗಡಿ, ಡಾ. ಎಸ್.ಶ್ರೀಕಂಠ, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಡಾ. ವೆಂಕಟಸ್ವಾಮಯ್ಯ, ನಾಗೇಂದ್ರಸ್ವಾಮಿ, ಡಾ. ಗಣೇಶ್ ನಾಯಕ್, ಡಾ. ಗಂಗಾಧರ್, ಡಾ. ವನಿತಕ್ಕ ಸೇರಿದಂತೆ ಹಲವರನ್ನು ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಡಾ. ಟಿ.ವೆಂಕಟಸ್ವಾಮಯ್ಯ ಅವರ 'ಸೊಪ್ಪು ಸಂಜೀವಿನಿ', ಡಾ. ಲತಾ ಶೇಖರ್‌ರವರ 'ಯೋಗ ಸಂಜೀವಿನಿ', 'ಸಸ್ಯ ಸಂಜೀವಿನಿ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಹಾಗೆಯೇ ಅದಮ್ಯ ಚೇತನ ಸಂಸ್ಥೆಯ ರಕ್ತದಾನದ ವೆಬ್‌ಸೈಟ್ ಅನ್ನು ಪುನರ್ ಉದ್ಘಾಟಿಸಲಾಯಿತು.

### ಸಚಿವರಿಂದ ಮಕ್ಕಳಿಗೆ ಅಭಿನಂದನೆ

ಆರೋಗ್ಯ ಸಂಜೀವಿನಿ ಕಾರ್ಯಕ್ರಮದಲ್ಲಿ ಸೇವಾ ಇನ್ ಆಕ್ಷನ್ ಸಂಸ್ಥೆಯ ವಿಶೇಷಚೇತನ ಮಕ್ಕಳು ಅದ್ಭುತವಾಗಿ ನೃತ್ಯ ಪ್ರದರ್ಶಿಸಿದರು. ಕೇಂದ್ರ ಸಚಿವ ನಡ್ಡಾ ಅವರು ವಿಶೇಷಚೇತನ ಮಕ್ಕಳನ್ನು ಅಭಿನಂದಿಸಿದರು. ಈ ವೇಳೆ ಮಕ್ಕಳು ಸಚಿವರೊಂದಿಗೆ ಫೋಟೊ ತೆಗೆಸಿಕೊಂಡರು. ಶಾರದಾ ಶಾಲೆಯ ಮಕ್ಕಳು ಕಸ ವಿಂಗಡಣೆಯ ಬಗ್ಗೆ ಜಾಗೃತಿ ಮೂಡಿಸುವ ನಾಟಕವನ್ನು ಪ್ರದರ್ಶಿಸಿ, ಎಲ್ಲರ ಮೆಚ್ಚುಗೆ ಗಳಿಸಿದರು. ಇದಲ್ಲದೇ ನೃತ್ಯ, ಕೋಲಾಟ ವಾದನ, ತಾಳವಾದ್ಯ, ಭರತನಾಟ್ಯ, ಶ್ಯಾಡೋ ಪ್ಲೇ, ಮೈಸೂರು ಮಲ್ಲಿಗೆ ನೃತ್ಯ ನಾಟಕ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.